ಶ್ರೀ ಬಸವರಾಜರಾಯರೆಡ್ಡಿ : 14 ಲಕ್ಷ ಮಾತ್ರ ಕಡಿಮೆ ಬರುತ್ತದೆ ನೀವು 44 ಲಕ್ಷ ಎಂದು ಹೇಳುತ್ತಿದ್ದೀರಿ. ಅದರಲ್ಲಿ ಯಾವುದು ಸರಿ, ಮತ್ತು ಯಾವುದು ತಪ್ಪು ಎನ್ನುವುದು ಇಲ್ಲಿ ಪ್ರಶ್ನೆ ಅಷ್ಟೆ.

ಶ್ರೀ ಕೆ.ಆರ್. ರಮೇಶ್‌ಕುಮಾರ್ : ಅವರು ಹೇಳುತ್ತಿರುವುದು ಸರಿಯೇ, ಮಾನ್ಯ ಮಂತ್ರಿಗಳು ಹೇಳುತ್ತಿರುವುದು ಸರಿಯೇ ಎಂದು ನಾನು ಕೇಳುತ್ತಿರುವುದು. I am not trying to intervene ಅದು ನಮ್ಮ ಸಮಸ್ಯೆ. ದಯವಿಟ್ಟು ಕೇಳಿ.

ಶ್ರೀ ಹೆಚ್.ಡಿ. ಬಸವರಾಜು : ನಾನು ಕಳುಹಿಕೊಡುತ್ತೇನೆ. ತಾವು ಪರಿಶೀಲನೆ ಮಾಡಿ.

ಅಧ್ಯಕ್ಷರು : ಮಾನ್ಯ ಬಸವರಾಜುರವರೆ, ಈ ಅಂಕಿಅಂಶಗಳ ಬಗ್ಗೆ ಸ್ವಲ್ಪ ಗೊಂದಲವಾಗಿದೆ, ದಯಮಾಡಿ ತಾವು ಮಾನ್ಯ ಸಚಿವರ ಜೊತೆಯಲ್ಲಿ ಕುಳಿತುಕೊಂಡು ಅದರ ಬಗ್ಗೆ ಚರ್ಚೆ ಮಾಡಿ ತಮ್ಮ ಅನುಮಾನಗಳನ್ನು ಪರಿಹಾರ ಮಾಡಿಕೊಳ್ಳಿ. ಮುಂದಿನ ಪ್ರಶ್ನೆ ಕೇಳುವುದಕ್ಕೆ ಅನುಕೂಲ ಮಾಡಿಕೊಡಿ. ಇನ್ನೂ 6-7 ಪ್ರಶ್ನೆಗಳು ಉಳಿದಿವೆ. ದಯವಿಟ್ಟು ಸಹಕರಿಸಿ.

ಶ್ರೀ ಹೆಚ್.ಡಿ. ಬಸವರಾಜು : ರೈತರ ಪಂಪುಸೆಟ್ಟುಗಳಿಗೆ ವಿಧಿಸುವಂತಹ ಶುಲ್ಕ ರಾಜ್ಯದಲ್ಲಿ ಎಲ್ಲಾ ಜಿಲ್ಲೆಗಳಲ್ಲಿಯೂ ಸಮಾನವಾಗಿದೆಯಾ? ಏಕೆಂದರೆ ನನ್ನ ಕೊಡಗು ಜಿಲ್ಲೆಯಲ್ಲಿ ರೈತರ ಪಂಪುಸೆಟ್ಟುಗಳಿಗೆ ತಾವು ವಿಧಿಸುತ್ತಿರುವಂತಹ ಶುಲ್ಕವನ್ನು ಇತರೆ ಜಿಲ್ಲೆಗಳಿಗೆ ನಾವು ಹೋಲಿಕೆ ಮಾಡಿದಾಗ ವ್ಯತ್ಯಾಸ ನನಗೆ ಕಂಡುಬಂದಿದೆ. ಇದರ ಬಗ್ಗೆ ಮಾನ್ಯ ಸಚಿವರು ಉತ್ತರವನ್ನು ಕೊಡಬೇಕೆಂದು ನಾನು ಕೇಳಿಕೊಳ್ಳುತ್ತಿದ್ದೇನೆ.

ಶ್ರೀ ಹೆಚ್.ಡಿ. ರೇವಣ್ಣ : ದಯಮಾಡಿ ಮಾನ್ಯ ಸದಸ್ಯರು ತಮ್ಮ ಪ್ರಶ್ನೆಯನ್ನು ರಿಪೀಟ್ ಮಾಡಬೇಕು.

ಶ್ರೀ ಹೆಚ್.ಡಿ. ಬಸವರಾಜು : ಈ ರೈತರ ಪಂಪುಸೆಟ್ಟುಗಳಿಗೆ ತಾವು ವಿಧಿಸುತ್ತಿರುವಂತಹ ಶುಲ್ಕ ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿಯೂ ಸಮಾನವಾಗಿದೆಯಾ? ನನಗೆ ಗೊತ್ತಿರುವಂತಹ ಅಂಶದ ಪ್ರಕಾರ ಇದರ ಬಗ್ಗೆ ನಾನೇ ಉತ್ತರವನ್ನು ಹೇಳಿಬಿಡುತ್ತೇನೆ. ಕೊಡಗು ಜಿಲ್ಲೆಯಲ್ಲಿ ರೈತರ ಪಂಪುಸೆಟ್ಟುಗಳಿಗೆ ವಿಧಿಸುತ್ತಿರುವಂತಹ ಶುಲ್ಕ ಇತರ ಜಿಲ್ಲೆಯವರಿಗಿಂತ ಜಾಸ್ತಿ ಇದೆ? ಅದು ಹೇಗೆ ಸಾಧ್ಯ?

ಶ್ರೀ ಹೆಚ್.ಡಿ. ರೇವಣ್ಣ : ಮಾನ್ಯ ಅಧ್ಯಕ್ಷರೆ, ಇದು ಅವರ ಮೂಲ ಪ್ರಶ್ನೆಯಲ್ಲಿ ಇಲ್ಲ, ಅವರು ಉತ್ತರ ಬೇಕಾದರೆ ಸೆಪರೇಟಾಗಿ ಪ್ರಶ್ನೆಯನ್ನು ಕಳುಹಿಸಿದರೆ ನಾನು ಅವರಿಗೆ ತಿಳಿಸುತ್ತೇನೆ.

ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಯಲ್ಲಿನ ಕೆರೆಗಳಲ್ಲಿನ ಹೂಳುಗಳು

40 (143): ಶ್ರೀಮತಿ ಶಕುಂತಲಾ ಟಿ. ಶೆಟ್ಟಿ (ಪುತ್ತೂರು) ಮಾನ್ಯ ಜಲ ಸಂಪನ್ಮೂಲ ಮತ್ತು ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ದಕ್ಷಿಣ ಕನ್ನಡ ಉತ್ತು ಉಡುಪಿ ಜಿಲ್ಲೆಗಳಲ್ಲಿನ ಕೆರೆಗಳ ಸಂಖ್ಯೆ ಎಷ್ಟು; ಈ ತನಕ ಎಷ್ಟು ಕೆರೆಗಳ ಹೂಳನ್ನು ಎತ್ತಿ ದುರಸ್ತಿಗೊಳಿಸಲಾಗಿದೆ;

ಆ) ಬಾಕಿ ಉಳಿದಿರುವ ಕೆರೆಗಳ ಹೂಳೆತ್ತುವ ಮತ್ತು ದುರಸ್ತಿಗೊಳಿಸುವ ಕಾರ್ಯವನ್ನು ಮಾಡಿ ಅಂತರ್ಜಲ ಮಟ್ಟವನ್ನು ವೃದ್ಧಿಸುವ ಯೋಜನೆಗೆ ಚಾಲನೆ ಯಾವಾಗ ನೀಡಲಾಗುವುದು;

ಇ) ಪುತ್ತೂರು ತಾಲ್ಲೂಕಿನಲ್ಲಿ ಎಷ್ಟು ಕೆರೆಗಳಿವೆ; ಹಾಗೂ ಅವುಗಳಲ್ಲಿ ಎಷ್ಟು ಕೆರೆಗಳ ಹೂಳನ್ನು ಎತ್ತಲಾಗಿದೆ?

ಶ್ರೀ ಮಲ್ಲಿಕಾರ್ಜುನ ಖರ್ಗೆ (ಜಲ ಸಂಪನ್ಮೂಲ ಮತ್ತು ಸಾರಿಗೆ ಸಚಿವರು)

ಅ) ಸಣ್ಣ ನೀರಾವರಿ ಇಲಾಖೆಯ ವ್ಯಾಪ್ತಿಯಲ್ಲಿ ಒಟ್ಟು 6 ಕೆರೆಗಳು ಇರುತ್ತವೆ. (ದಕ್ಷಿಣ ಕನ್ನಡ ಜಿಲ್ಲೆಯಲ್ಲಿ 2, ಉಡುಪಿ ಜಿಲ್ಲೆಯಲ್ಲಿ 4) ಈ 6 ಕೆರೆಗಳ ಭಾಗಶಃ ಹೂಳನ್ನು ಎತ್ತಿ ದುರಸ್ತಿಗೊಳಿಸಲಾಗಿದೆ.

ಆ) ಮೇಲ್ಕಂಡ 6 ಕೆರೆಗಳ ಪೈಕಿ ಉಡುಪಿ ಜಿಲ್ಲೆಯ 3 ಕೆರೆಗಳನ್ನು ರೈತ ಕಾಯಕ ಕೆರೆ ಯೋಜನೆಯಡಿಯಲ್ಲಿ ಸಮಗ್ರ ಅಭಿವೃದ್ಧಿ ಪಡಿಸಲಾಗಿದೆ ಮತ್ತು ಕಾರ್ಕಳ ತಾಲ್ಲೂಕಿನ ಅನೆಕೆರೆಯ ಸಮಗ್ರ ಅಭಿವೃದ್ಧಿಯನ್ನು ಕೈಗೊಳ್ಳಲಾಗುವುದು.

ಇ) ಪುತ್ತೂರು ತಾಲ್ಲೂಕಿನಲ್ಲಿ ಸಣ್ಣ ನೀರಾವರಿ ವ್ಯಾಪ್ತಿಯಲ್ಲಿ ಯಾವುದೇ ಕೆರೆಗಳಿರುವುದಿಲ್ಲ.

ಶ್ರೀಮತಿ ಶಕುಂತಲಾ ಟಿ. ಶೆಟ್ಟಿ : ಮಾನ್ಯ ಸಭಾಧ್ಯಕ್ಷರೆ, ಮಾನ್ಯ ಸಚಿವರು ಉತ್ತರವನ್ನು ಕೊಟ್ಟಿದ್ದಾರೆ. ಆದರೆ ನಮ್ಮ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಎರಡು ಕೆರೆಗಳು ಮಾತ್ರ ಇವೆ ಎಂದು ತಿಳಿಸಿದ್ದಾರೆ, ಪುತ್ತೂರು ತಾಲ್ಲೂಕಿನಲ್ಲಿ ಸಣ್ಣ ನೀರಾವರಿ ವ್ಯಾಪ್ತಿಯಲ್ಲಿ ಯಾವುದೇ ಕೆರೆಗಳು ಇರುವುದಿಲ್ಲವೆಂದು ತಿಳಿಸಿರುತ್ತಾರೆ. ನನ್ನ ಗಮನಕ್ಕೆ ಬಂದ ಹಾಗೆ ನಮ್ಮ ಪುತ್ತೂರು ತಾಲ್ಲೂಕಿನಲ್ಲಿ ಅದಕ್ಕಿಂತಲೂ ಹೆಚ್ಚು ಕರೆಗಳು ಇವೆ. ಈ ಸಣ್ಣ ನೀರಾವರಿ ವ್ಯಾಪ್ತಿಯಲ್ಲಿ ಯಾವ ತಳಹದಿಯಲ್ಲಿ ಆಧಾರದಲ್ಲಿ ಕೆರೆಗಳನ್ನು ಆಯ್ಕೆ ಮಾಡಲಾಗುತ್ತದೆ? ನಮ್ಮ ನದಿಗಳಿಲ್ಲದ ಕಡೆಯಲ್ಲಿರುವಂತಹ ಕೆರೆಗಳನ್ನು ಸಣ್ಣ ನೀರಾವರಿ ಇಲಾಖೆಯ ವ್ಯಾಪ್ತಿಯಲ್ಲಿ ತೆಗೆದುಕೊಳ್ಳಬೇಕೇಂದು ನಾನು ಕೇಳಿಕೊಳ್ಳುತ್ತೇನೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ : ಸನ್ಮಾನ್ಯ ಅಧ್ಯಕ್ಷರೆ, 40 ಹೆಕ್ಟೇರ್ಸ್‌ಗಿಂತಲೂ ಮತ್ತು 2 ಸಾವಿರ ಇದು ಸಣ್ಣ ನೀರಾವರಿ ಇಲಾಖೆಗೆ ಬರುತ್ತದೆ. 40 ಹೆಕ್ಟೇರ್ಸ್‌ಗಿಂತ ಮೇಲೆ ಅಚ್ಚುಕಟ್ಟು ಏನು ಇರುತ್ತದೆಯೋ ಆ ಅಚ್ಚುಕಟ್ಟು ಇರತಕ್ಕಂತಹ ಎಲ್ಲಾ ಕೆರೆಗಳು ಸಣ್ಣ ನೀರಾವರಿಗೆ ಬರುತ್ತದೆ. ಅದಕ್ಕಿಂತಲೂ ಕಡಿಮೆ ಇರತಕ್ಕಂತಹ ಅಚ್ಚುಕಟ್ಟು ಅದು ಜಿಲ್ಲಾ ಪಂಚಾಯತ್ ವ್ಯಾಪ್ತಿಗೆ ಬರುತ್ತದೆ. ಅದಕ್ಕಾಗಿ ನಮ್ಮ ವ್ಯಾಪ್ತಿಯಲ್ಲಿ 6 ಕೆರೆಗಳು ಬರುತ್ತವೆ, ಉಳಿದಂತಹ ಕೆರೆಗಳು ಜಿಲ್ಲಾ ಪಂಚಾಯತ್‌ಗೆ ಬರುತ್ತದೆ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ 142, ಉಡುಪಿಯಲ್ಲಿ ಸುಮಾರು ಸಣ್ಣ ಕೆರೆಗಳು 531 ಕೆರೆಗಳು ಇರುತ್ತವೆ. ಅಂದರೆ ಇವುಗಳ ಪೈಕಿ 19 ಕೆರೆಗಳು ಹೂಳೆತ್ತುವ ದೃಷ್ಟಿಯಿಂದ ಕೆಲಸವನ್ನು ಫುಡ್ ಫಾರ್ ವರ್ಕ್‌ನಲ್ಲಿ ಮಾಡಿದ್ದಾರೆ. ಅದರ ಬಗ್ಗೆ ನಾನು ಅಂಕಿಸಂಖ್ಯೆಯನ್ನು ಕೊಡುವುದಕ್ಕೆ ಬರುವುದಿಲ್ಲ. ತಾವು ಬೇರೆ ಪ್ರಶ್ನೆಯನ್ನು ಕೇಳಿದರೆ ಅದರ ಬಗ್ಗೆ ಮಾಹಿತಿಯನ್ನು ಕೊಡುತ್ತೇನೆ.

1.30 ಪಿಎಂ

ತಾವು ದಕ್ಷಿಣ ಕನ್ನಡ ಜಿಲ್ಲೆಯಾಗಲಿ, ಉಡುಪಿ ಜಿಲ್ಲೆಯಾಗಲಿ ಸಣ್ಣ ನೀರಾವರಿ ಕೆಲಸ ಇಲ್ಲವೆಂದು ಹೇಳಿದ್ದೀರಿ. ಅದು ನಿಜ. ಏಕೆಂದರೆ ಎಲ್ಲಿಯವರೆಗೆ ನಮಗೆ ಒಂದು ಫೀಸಿಬಲ್ ರಿಪೋರ್ಟ್

ಬರುವುದಿಲ್ಲ, ಅಥವಾ ಕನಿಷ್ಟಪಕ್ಷ ನಲ್ವತ್ತು ಹೆಕ್ಟೇರ್‌ಗಿಂತ ಹೆಚ್ಚು ನೀರಾವರಿ ಆಗುತ್ತದೆ ಎನ್ನತಕ್ಕಂಥ ಯಾವುದಾದರೂ ಪ್ರಾಂತ್ಯ ಅಥವಾ ಭಾಗ ಇದ್ದರೆ ಅಂತಹ ಕಡೆ ಕೆಲಸಗಳನ್ನು ತೆಗೆದುಕೊಳ್ಳಬಹುದು. ಅದಕ್ಕಾಗಿ ಸಣ್ಣಮಟ್ಟ ಕೆರೆಗಳು ಜಿಲ್ಲಾ ಪಂಚಾಯತ್‌ಗೆ ಬರುವುದರಿಂದ ತಾವು ಜಿಲ್ಲಾ ಪಂಚಾಯತ್‌ಗೆ ಇದನ್ನು ಕೇಳಬೇಕು.

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ : ಮಾನ್ಯ ಅಧ್ಯಕ್ಷರೆ, ಮಂತ್ರಿಗಳ ಉತ್ತರದಲ್ಲಿ ಆರು ಕೆರೆಗಳನ್ನು ಭಾಗಶಃ ಹೊಳೆತ್ತಿ ದುರಸ್ಥಿಗೊಳಿಸಲಾಗಿದೆ ಎಂದು ಹೇಳುತ್ತಾರೆ. ಇದು ಭಾಗಶಃ ಮಾತ್ರ ಮಾಡಿದ್ದಾರೆ. ಏಕೆಂದರೆ ನನ್ನ ಕ್ಷೇತ್ರದಲ್ಲಿ ಶಾಂತಾರು ಮಾರ್ಗ ಅಂತ ಇದೆ. ಅದು ಐವತ್ತು ಲಕ್ಷ ರೂಪಾಯಿಗಳದ್ದು ಪ್ರಸ್ತಾವನೆ ಬಂದಿದೆ. ಅದರಲ್ಲಿ ಹದಿನೆಂಟು ಲಕ್ಷದಲ್ಲಿ ಬೇರೆಬೇರೆ ಕಾಂಪೊನೆಂಟ್ಸ್ ಎಲ್ಲಾ ಇದೆ. ಉಳಿದ ಭಾಗಕ್ಕೆ ನಲನಾಡು, ಶಾಂತಾರು ಇಂತಹ ಉಳಿದ ಕಡೆ ಹೂಳು ಎತ್ತಲಿಕ್ಕೆ ಯಾವಾಗ ಹಣ ಒದಗಿಸುತ್ತೀರಿ ಎಂದು ನಾನು ಮಾನ್ಯ ಮಂತ್ರಿಗಳನ್ನು ಕೇಳುತ್ತೇನೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಜಯಪ್ರಕಾಶ್ ಹೆಗ್ಡೆಯವರಿಗೂ ಗೊತ್ತಿದೆ. ಒಂದೊಂದು ಕೆರೆಯ ಹೂಳು ಎತ್ತಬೇಕು ಎಂದರೆ ಕನಿಷ್ಟ ಲಕ್ಷಾಂತರ ರೂಪಾಯಿ ಬೇಕಾಗುತ್ತದೆ. economically ಅದು feasible ಆಗುವುದಿಲ್ಲ. ಆದರೂ ಕೂಡ ಬರಗಾಲ ಕಾಮಗಾರಿಯಲ್ಲಿ ಅಲ್ಲಿ ಇಲ್ಲಿ ಏನು ವೇಸ್ಟ್ ಆಗುತ್ತದೆ ಅದಕ್ಕಿಂತಲೂ ಈ ಸಣ್ಣ ನೀರಾವರಿ ಆಸ್ಥಿಯನ್ನು ಉಳಿಸಿಕೊಳ್ಳಬೇಕು. ಆದಷ್ಟು ಇವನ್ನು ದುರಸ್ಥಿ ಮಾಡಬೇಕೆಂದು ಹೇಳಿ ಎಷ್ಟು ಹಣ ಇಟ್ಟಿದ್ದೇವೆ ಅದನ್ನು ಪರಿಣಾಮಕಾರಿಯಾಗಿ ಉಪಯೋಗ ಮಾಡುವ ಯೋಚನೆ ಮಾಡಿದ್ದು ಅವನ್ನು ಕಂಪ್ಲೀಟ್ ಮಾಡಬೇಕಾಗಿದ್ದರೆ ಹೆಚ್ಚಿಗೆ ಹಣ ಪ್ರಾವಿಸನ್ ಮಾಡಬೇಕಾಗುತ್ತದೆ. ಅದಕ್ಕಾಗಿ ಇಷ್ಟೊಂದು ಹಣದ ಕೊರತೆಯೂ ಇದೆ. ಒಂದು ಯೋಜನೆ ನಮ್ಮ ಮುಂದಿದೆ. ಅದು ಏನೆಂದರೆ ಸಣ್ಣ ನೀರಾವರಿ ನಿಗಮವೆಂದು ಮಾಡಿ ಹೆಚ್ಚಿಗೆ ಹಣ ಸಂಗ್ರಹಿಸಿ ಅಂತಹ ಕೆಲಸಗಳನ್ನು ಪೂರ್ಣಗೊಳಿಸತಕ್ಕಂಥಾದ್ದನ್ನು ಮಾಡಬೇಕು ಎನ್ನತಕ್ಕಂಥ ಒಂದು ಆಲೋಚನೆ ಇದೆ. ಬಹುಶಃ ಅದಕ್ಕೇನಾದರೂ ಹಣಕಾಸಿನ ವ್ಯವಸ್ಥೆಯಾದರೆ ಅಂತಹ ಅಪೂರ್ಣವಾದಂಥ ಕೆಲಸಗಳನ್ನು ಪೂರ್ಣ ಮಾಡತಕ್ಕಂಥಾದ್ದನ್ನು ಮಾಡಬಹುದು.

ಪ್ರಶ್ನೆ : 41(312)– ಮಾನ್ಯ ಸದಸ್ಯರಾದ ಶ್ರೀ ಎ. ನಾರಾಯಣಸ್ವಾಮಿ ಅವರು ಗೈರುಹಾಜರಿದ್ದರು.

ಹೊನ್ನಾವರ ಬಳಿ ಶರಾವತಿ ನದಿಗೆ ಅಡ್ಡವಾಗಿ ನಿರ್ಮಿಸಿರುವ ಸೇತುವೆ ಕುರಿತು

42 (282): ಶ್ರೀ ಶಿವಾನಂದ ನಾಯ್ಕ (ಭಟ್ಕಳ) ಮಾನ್ಯ ಲೋಕೋಪಯೋಗಿ ಮತ್ತು ಇಂಧನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಹೊನ್ನಾವರ ಬಳಿ ಶರಾವತಿ ನದಿಗೆ ಅಡ್ಡಲಾಗಿ ಸೇತುವೆ ಯಾವಾಗ ನಿರ್ಮಿಸಲಾಯಿತು! ಈ ಸೇತುವೆ ನಿರ್ಮಾಣಕ್ಕೆ ಆದ ವೆಚ್ಚ ಎಷ್ಟು;

ಆ) ನಿರ್ಮಾಣ ಪೂರ್ಣಗೊಳಿಸಿದ ವರ್ಷದಿಂದ ಇಲ್ಲಿಯವರೆಗೆ ಸೇತುವೆ ದುರಸ್ತಿಗಾಗಿ ತಗುಲಿದ ವರ್ಷವಾರು ವೆಚ್ಚವೆಷ್ಟು!